ಜೈನ್‌ಕಾಲೇಜ್, ಜಯನಗರ.

ದ್ವಿತೀಯ ಪಿ.ಯು.ಸಿ –ಪೂರ್ವ ಸಿದ್ಧತಾ ಪರೀಕ್ಷೆ– ಮಾದರಿ ಪ್ರಶ್ನೆಪತ್ರಿಕೆ(೧) – ೨೦೧೭

ಸಮಯ : ೩.೧೫ ಗಂಟೆ ವಿಷಯ:– ಕನ್ನಡ ಅಂಕಗಳು–೧೦೦

---

## ಅ–ವಿಭಾಗ

**ಖ ಅ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: ೧೦ಥಾ=೧೦**

೧. ರಾವಣನಎದುರು ಪ್ರತ್ಯಕ್ಷವಾದ ವಿದ್ಯಾದೇವತೆಯಾರು?

೨. ತತ್ವಜ್ಞಾನವನ್ನು ಕೇಳದವರಾರು?

೩. ಮೊಮ್ಮಗಳು ಏನು ಮಾಡುತ್ತಿದ್ದಳು?

೪. ಕವಯಿತ್ರಿಯಾರಲ್ಲಿ ಮೊರೆಇಡುತ್ತಾರೆ?

೫. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?

೬. ಕಲಾಂ ಅವರುಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್‌ಆಗಿದ್ದರು?

೭. ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರೇನು?

೮. ನಿರೂಪಕರಕೊಡಲಿಯಆಕಾರ ಹೇಗಿತ್ತು?

೯. ಆನೆ ಯಾರಅಂಗಡಿಯನ್ನುದೂಡಿ ಬೀಳಿಸಿತು?

೧೦. ಪುಟಯ್ಯಯಾರು?

## ಆ–ವಿಭಾಗ

**ಖಖ ಅ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿಉತ್ತರಿಸಿ : ೪ಥ೨=೮**

೧೧. ಹೆಂಡತಿಯ ಪರಿಬಕ್ಕಾಗಿಗಂಡುಗೂಸು ಏನು ಮಾಡುತ್ತಾನೆ?

೧೨. ಯಾರಿಗೆ ಷಡ್ರಸಾನ್ನವನಿಕ್ಕಿಉಪಯೋಗವಿಲ್ಲ? ಏಕೆ?

೧೩. ಮಗು ಏನೇನು ಕಲಿಯಿತು?

೧೪. ಶಿಲುಬೆಗೇರಿಸಿದವರ ಗುಣಗಳು ಇಂದುಯಾವ ವೇಷ ತಾಳಿವೆ?

೧೫. ಆತ್ಮಕ್ಕೆಕುಮಟು ಹತ್ತುವುದುಎಂದರೇನು?

**ಆ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : ೩ಥ೨=೬**

೧೬. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

೧೭. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

೧೮. ಕಮಲ ಮೇಡಂ ವೈದ್ಯರಯಾವ ಸಲಹೆಯನ್ನು ರೂಢಿಸಿಕೊಂಡರು?

೧೯. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರಯಾವುದು?

**ಇ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿಉತ್ತರಿಸಿ : ೩ಥ೨=೬**

೨೦. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

೨೧. ಕಾಡಪ್ಪ ಶೆಟ್ಟರುಯಾವ ವರ್ತಮಾನವನ್ನು ಮುಟ್ಟಿಸಿದರು?

೨೨. ನಿರೂಪಕರುಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಮಾಡಿಜಬ್ಬಾರ್‌ಗೆಏನೆಂದರು?

೨೩. ಡ್ರೈವರ್ ಅಬ್ಬಾಸ್, ಕ್ಲೀನರ್‌ಕೃಷ್ಣರ ಸಾವಿಗೆ ಕಾರಣವೇನು?

## ಇ–ವಿಭಾಗ

**ಖಖಖ ಅ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: ೨ಥ೩=೬**

೨೪. ತಾನೆ ಲಘು ಮಾಡಿ ಲಘುವಾದನಯ್ಯ.

೨೫. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ

೨೬. ಜ್ಯೋತಿ ನಿನ್ನ್ಯಾರ ಹೋಲರ.

**ಆ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: ೧ಥ೩=೩**

೨೭. ಆಪರೇಷನ್ ಆಗಬೇಕು ಪರವಾಗಿಲ್ಲವಾ?

೨೮. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

**ಇ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: ೧ಥ೩=೩**

೨೯. ಅದನ್ನು ಸುತ್ತಿಗೆಎಂದುಕರೆಯಬಹುದಿತ್ತು.

೩೦. ಆನೆ ಜೊತೆ ಮಲಗುತ್ತೀಯಾ; ನೀನ್ಯಾವಗಂಡಸು.

## ಈ–ವಿಭಾಗ

ಖಗಿ ಅ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : ೩x೪=೧೨

೩೧. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

೩೨. ತನಗಾದಅವಮಾನವನ್ನುದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

೩೩. ನಗರಜೀವನದಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

೩೪. ಶಿಲುಬೆಗೇರಿದ ಜೀಸಸ್‌ನದೇಹಏನನ್ನು ಹೇಳುವಂತಿದೆ? ವಿವರಿಸಿ.

ಆ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :

೨x೪=೮

೩೫. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರುಯಾವ ಕಾರಣಗಳನ್ನು ಉದಾಹರಿಸುತ್ತಾರೆ?

೩೬. ಕಲಾಂ ಅವರುಯಾವಾಗಲೂ ಸಾಧ್ಯತೆಗಳನ್ನು ಅರಸುವಆಶಾಜೀವಿ ಹೇಗೆ? ವಿವರಿಸಿ.

೩೭. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

ಇ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : ೨x೪=೮

೩೮. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

೩೯. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡಆನೆಯನ್ನು ಹೇಗೆ ಸಾಕಿದ.

೪೦. ಪುಟ್ಟಯ್ಯತನ್ನಅಸಹಾಯಕತೆಯನ್ನು ಹೇಗೆ ವಿವರಿಸಿದ್ದಾನೆ?

ಉ–ವಿಭಾಗ

ಗಿ ಅ. ಈ ಕೆಳಗಿನ ಪದ್ಯಗಳಿಗೆ ಭಾವಾರ್ಥ ಬರೆಯಿರಿ: ೧x೫=೫

೪೧. ರಾವಣನರೂಪು ಸೀತಾ
ದೇವಿಗೆತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

೪೨. ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೇ ಸಾಕೆನುತೆ ಬಸವಳಿದಳಿಂದುಮುಖಿ

ಆ. ಭಾಷಾಭ್ಯಾಸ: ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ : ೬x೨=೧೨

೪೩. ಈ ಪದಗಳಿಗೆ ತತ್ಸಮತದ್ಭವ ಬರೆಯಿರಿ : ಅಟವಿ, ವಿದ್ಯೆ

೪೪. ಈ ಪದಗಳಿಗೆ ನಾನಾರ್ಥ ಬರೆಯಿರಿ: ಕಲಿ, ಹೊಳೆ

೪೫. ಈ ಕ್ರಿಯಾಪದಗಳ ಕಾಲ ತಿಳಿಸಿಓಡಿದರು, ಬರುತ್ತಿದ್ದರು

೪೬. ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ: ಧರೆಯೊಳ್, ಬೆಳಗಿಂದ

೪೭. ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಕಟ್ಟಕಡೆಗೆ, ಮೆಲ್ಲಮೆಲ್ಲನೆ.

೪೮. ಯಾವುದಾದರೂಎರಡು ರೂಢನಾಮಗಳನ್ನು ಬರೆಯಿರಿ:

೪೯. ಈ ಕೆಳಗಿನ ಪದಗಳಲ್ಲಿ ಅನ್ಯದೇಶ್ಯಗಳನ್ನು ಗುರ್ತಿಸಿ:

ಹಾಲು, ರೈತ, ಮೈದಾನ, ಮೀನು, ಭರವಸೆ, ಸಾಬೂನು, ಮೊಸರು, ಸಾವಿರ

ಇ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಪ್ರಬಂಧ ಬರೆಯಿರಿ:

೧x೫=೫

೫೦. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅತ್ಯಗತ್ಯ.

೫೧. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.

ಈ. ಕೆಳಗಿನ ಎಲ್ಲಾಪ್ರಶ್ನೆಗಳಿಗೆ ಪತ್ರಲೇಖನ ಬರೆಯಿರಿ:

೧x೪=೪

೫೨. ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ತಿಗೆ ಪತ್ರ ಬರೆಯಿರಿ.

೫೩. ನಿಮ್ಮ ಬಡಾವಣೆಯ ಬೀದಿ ದೀಪಗಳ ದುರಸ್ಥಿ ಕುರಿತು ಬೆಸ್ಕಾಂನ ಅಭಿಯಂತರರಿಗೊಂದು ಪತ್ರ ಬರೆಯಿರಿ

ಉ. ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ ೧x೪=೪

೫೪. ದೇಶ ಸುತ್ತುಬೇಕು, ಕೋಶ ಓದಬೇಕು.

೫೫. ಉತ್ಸಾಹವೇಯೌವನ, ಚಿಂತೆಯೇ ಮುಪ್ಪು